<u>ಕರ್ನಾಟಕ ಲೋಕಾಯುಕ್ತ</u>

ಕಂಪ್ಲೆಂಟ್/ಉಪಲೋಕ್/ಬಿಡಿ/1292/2021
ಪಿ.ಓ.ಎ.ಆರ್.ಇ-06(ಮಂಡನಾಧಿಕಾರಿಗಳ ಶಾಖೆ).

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ ವೀದಿ,
ಬೆಂಗಳೂರು ದಿನಾಂಕ:16/02/2022.

**<u>ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 12(3) ರ ಅನ್ವಯ ಶಿಫಾರಸ್ಸು ವರದಿ</u>**

**ವಿಷಯ: ಶ್ರೀ. ಹೆಚ್. ಎಲ್. ಪುಟ್ಟಲಿಂಗಯ್ಯ ಬಿನ್ ಲಿಂಗಪ್ಪ, ಸಹಾಯಕ ಅಭಿಯಂತರರು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಹಾನಗಲ್ ಉಪವಿಭಾಗ, ಮೊಳಕಾಲ್ಮೂರ ತಾಲೂಕು, ಚಿತ್ರದುರ್ಗ ಜಿಲ್ಲೆರವರು ದುರ್ನಡತೆ/ದುರ್ವರ್ತನೆ ತೋರಿದ ಬಗ್ಗೆ.**

******

1) ಚಿತ್ರದುರ್ಗ ಭ್ರಷ್ಟಾಚಾರ ನಿಗ್ರಹದಳ ಪೋಲಿಸ್ ಠಾಣೆಯ ಪೋಲಿಸ್ ಉಪಾಧೀಕ್ಷಕರು (ಇನ್ನು ಮುಂದೆ 'ತನಿಖಾಧಿಕಾರಿ' ಎಂದು ಕರೆಯಲ್ಪಡುತ್ತಾರೆ) ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳೊಂದಿಗೆ ಸಲ್ಲಿಸಿದ ವರದಿಯಲ್ಲಿ **ಶ್ರೀ. ಹೆಚ್. ಎಲ್. ಪುಟ್ಟಲಿಂಗಯ್ಯ ಬಿನ್ ಲಿಂಗಪ್ಪ, ಸಹಾಯಕ ಅಭಿಯಂತರರು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಹಾನಗಲ್ ಉಪವಿಭಾಗ, ಮೊಳಕಾಲ್ಮೂರ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ** (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ). **ಶ್ರೀ. ಜಿ.ಮಂಜುನಾಥ, ಪೋಲಿಸ್ ಉಪಾಧೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ ಚಿತ್ರದುರ್ಗ ಪೋಲಿಸ್ ಠಾಣೆ, ಚಿತ್ರದುರ್ಗ ಜಿಲ್ಲೆ** (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ಇವರಿಗೆ ಬಂದ ಮಾಹಿತಿಯ ಮೇರೆಗೆ ಗೌಪ್ಯ ಮಾಹಿತಿಯನ್ನು ಸಂಗ್ರಹಿಸಿದಾಗ ಎದುರುದಾರರು ಅವರ ಸೇವಾ ಅವಧಿಯ ಚೆಕ್ ಅವಧಿಯಾದ ದಿ: 03/02/2004 ರಿಂದ 22/12/2016 ರವರೆಗೆ ಬಲ್ಲಮೂಲಗಳ ಆದಾಯಕ್ಕಿಂತ ಶೇಕಡ 20.99 ರಷ್ಟು ಮೌಲ್ಯದ ಅಸಮತೋಲನ ಆಸ್ತಿಗಳನ್ನು ಹೊಂದಿರುತ್ತಾರೆಂದು ಮತ್ತು ಎದುರುದಾರರು ಅವರ ಸೇವಾ ಅವಧಿಯಲ್ಲಿ ನಿಯಮಗಳನ್ನು ಪಾಲಿಸದೆ ದುರ್ನಡತೆ ತೋರಿಸಿರುವುದು ಕಂಡುಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 7(2)ರಡಿಯಲ್ಲಿ ತನಿಖೆ ಕೈಗೊಂಡಿದೆ.

ನಂ.ಕಂಪ್ಲೇಂಟ್/ಉಪಲೋಕ್/ಬಿಡಿ/1292/2021
ಪಿ.ಓ.ಎ.ಆರ್.ಇ-06

2) **ಪ್ರಕರಣದ ಸಂಕ್ಷಿಪ್ತ ಸಾರಾಂಶ :-**

i) ದೂರುದಾರರಾದ **ಶ್ರೀ. ಜಿ.ಮಂಜುನಾಥ, ಪೊಲೀಸ್ ಉಪಾಧೀಕ್ಷಕರು, ಭ್ರಷ್ಟಾಚಾರ ನಿಗ್ರಹದಳ ಚಿತ್ರದುರ್ಗ ಪೋಲೀಸ್ ಠಾಣೆ** ಇವರಿಗೆ ಬಂದ ಮಾಹಿತಿ ಮೇರೆಗೆ ಗೌಪ್ಯ ಮಾಹಿತಿಯನ್ನು ಸಂಗ್ರಹಿಸಿ, ಸೋರ್ಸ್ ವರದಿಯನ್ನು ಪೋಲಿಸ್ ಅಧೀಕ್ಷಕರು, ಭ್ರಷ್ಟಾಚಾರ ನಿಗ್ರಹದಳ ಪೂರ್ವ ವಲಯ ದಾವಣಗೆರೆ ರವರಿಗೆ ಸಲ್ಲಿಸಿದ್ದು, ಸದರಿ ವರದಿಯಲ್ಲಿ ಎದುರುದಾರರು ದಿ: 03/02/2004 ರಿಂದ 22/12/2016ರ ವರೆಗಿನ ಚೆಕ್ ಅವಧಿಯಲ್ಲಿ ಎದುರುದಾರರು ಸರ್ಕಾರಿ ಕರ್ತವ್ಯ ನಿರ್ವಹಿಸುತ್ತಿರುವಾಗ ಬಲ್ಲಮೂಲಗಳ ಆದಾಯಕ್ಕಿಂತ ಹೆಚ್ಚಿನ ಆಸ್ತಿಗಳನ್ನು ಅವರ ಮತ್ತು ಅವರ ಕುಟುಂಬದವರ ಹೆಸರಿನಲ್ಲಿ ಗಳಿಸಿದ ಬಗ್ಗೆ ವರದಿ ಸಲ್ಲಿಸಿರುತ್ತಾರೆ. ಆ ವರದಿಯನ್ನು ಪರಿಶೀಲಿಸಿ, ಪೊಲೀಸ್ ಅಧೀಕ್ಷಕರ ಕಛೇರಿ ಆದೇಶ ಸಂಖ್ಯೆ:03/ಎಸಿಬಿ/ಪೂ.ವ/ಡಿವಿಜಿ/2016, ದಿನಾಂಕ 21/12/2016ರ ಆದೇಶದ ಅನ್ವಯ ಆರಕ್ಷಕ ನಿರೀಕ್ಷಕರಾದ ಶ್ರೀ. ಬಿ.ವಿ.ಪ್ರಕಾಶ್, ಚಿತ್ರದುರ್ಗ ಭ್ರಷ್ಟಾಚಾರ ನಿಗ್ರಹದಳ, ಪೊಲೀಸ್ ಠಾಣೆರವರು ಎದುರುದಾರರ ವಿರುದ್ಧ ಅವರ ಠಾಣೆಯ ಗುನ್ನೆ ನಂ.03/2016ರಲ್ಲಿ ಕಲಂ 13(1)(ಇ) ಸಹಿತ 13(2) ಭ್ರಷ್ಟಾಚಾರ ನಿಗ್ರಹ ಕಾಯ್ದೆ 1988ರಡಿಯಲ್ಲಿ ಪ್ರಕರಣ ದಾಖಲಿಸಿ, ತನಿಖೆ ಕೈಗೊಂಡು ವರದಿಯನ್ನು ಸಲ್ಲಿಸಿರುತ್ತಾರೆ.

ii(a) ತನಿಖಾಧಿಕಾರಿಗಳು ಪ್ರಕರಣದ ತನಿಖೆಯ ಸಮಯದಲ್ಲಿ ಎದುರುದಾರರು ಅವರ ಮತ್ತು ಅವರ ಕುಟುಂಬದವರ ಹೆಸರಿನಲ್ಲಿ ಬೇನಾಮಿಯಾಗಿ ಈ ಕೆಳಕಂಡ ಸ್ಥಿರಾಸ್ತಿಗಳನ್ನು ಗಳಿಸಿರುತ್ತಾರೆಂದು ವರದಿಯಲ್ಲಿ ತಿಳಿಸಿರುತ್ತಾರೆ.

| ಕ್ರ.ಸಂ. | ಆಸ್ತಿಯ ವಿವರ | ಯಾರ ಹೆಸರಿನಲ್ಲಿ ಖರೀದಿಸಲಾಗಿದೆ. | ಅಂದಾಜು ಮೌಲ್ಯ ರೂ.ಗಳಲ್ಲಿ |
|---|---|---|---|
| 1 | ಚಿತ್ರದುರ್ಗ ನಗರದ ತರಳಬಾಳು ನಗರದಲ್ಲಿ ಮೆದೆಹಳ್ಳಿ ಗ್ರಾಮ ಪಂಚಾಯಿತಿ 2258/18, ಸೈಟ್ ನಂ.18ರಲ್ಲಿನ 1 ಮತ್ತು 2ನೇ ಮಹಡಿ ಕಟ್ಟಿದ ಮನೆ. | ಎದುರುದಾರರ ಪತ್ನಿ ಶ್ರೀಮತಿ ಶರಾವತಿ ಅವರ ಹೆಸರಿನಲ್ಲಿದೆ. | 20,25,000/- |
| 2 | ಚಿತ್ರದುರ್ಗನಗರದ ಮೆದೆಹಳ್ಳಿ ಗ್ರಾಮದ ರಿ.ಸ.ನಂ.85 ಮತ್ತು 86 ಖಾತೆ ನಂ.2273, ಆಸ್ತಿ ನಂ.225 ಈಶ್ವರ ಬಡಾವಣೆಯ ನಿವೇಶನ ಸಂ.225ರಲ್ಲಿ ಮನೆಯನ್ನು ಕಟ್ಟಿರುತ್ತಾರೆ. | ಎದುರುದಾರರ ತಾಯಿ ಶ್ರೀಮತಿ. ಲಕ್ಷ್ಮಮ್ಮರವರ ಹೆಸರಿನಲ್ಲಿ | 17,70,000/- |
| 3 | ಚಿತ್ರದುರ್ಗನಗರದ ಮೆದೆಹಳ್ಳಿ ಗ್ರಾಮದ ರಿ.ಸ.ನಂ.82ರಲ್ಲಿ ವಿಂಗಡಿಸಿರುವ ಸೈಟ್ ನಂ.52, ಖಾತಾ ನಂ.1064: 1682 ಆಸ್ತಿ ನಂ.52, ವಿಸ್ತೀರ್ಣ 9 X 7.5 ಮೀಟರ್ ಅಳತೆಯ ನಿವೇಶನದಲ್ಲಿ ಮನೆಯನ್ನು ನಿರ್ಮಿಸಿರುತ್ತಾರೆ. | ಎದುರುದಾರರ ತಾಯಿ ಶ್ರೀಮತಿ. ಲಕ್ಷ್ಮಮ್ಮರವರ ಹೆಸರಿನಲ್ಲಿ | 5,50,000/- |

| | | | |
|---|---|---|---|
| 4 | ಕೆಳಕೋಟೆ ಗ್ರಾಮದ ರಿ.ಸ.ನಂ.66ರಲ್ಲಿ ವಿಂಗಡಿಸಿರುವ ಸೈಟ್ ನಂ.53, ಖಾತೆ ನಂ.1381:1330 ಆಸ್ತಿ ನಂ.53ನ್ನು ದಿ: 24/11/2006 ರಂದು ಖರೀದಿಸಿರುತ್ತಾರೆ. | ಎದುರುದಾರರ ಪತ್ನಿ ಶ್ರೀಮತಿ. ಶರಾವತಿರವರ ಹೆಸರಿನಲ್ಲಿ | 63,000/- |
| 5 | ಮೆದೆಹಳ್ಳಿ ಗ್ರಾಮದ ರಿ.ಸ.ನಂ.8586 ಖಾತೆ ನಂ.2273, ಆಸ್ತಿ ನಂ.225 ನಿವೇಶನ ಸಂ.225ನ್ನು ದಿ: 24/11/2006 ರಂದು ಖರೀದಿಸಿರುತ್ತಾರೆ. | ಎದುರುದಾರರ ತಾಯಿ ಶ್ರೀಮತಿ. ಲಕ್ಷ್ಮಮ್ಮರವರ ಹೆಸರಿನಲ್ಲಿ | 38,000/- |
| 6 | ಮದಕರಿಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮಹೇಶ್ವರಿ ಎಸ್ಟೇಟ್ ಜಯನಗರ ಬಡಾವಣೆಯಲ್ಲಿರುವ ನಿವೇಶನ ಸಂ.233, ಖಾತೆ ಸಂ.791 ವಿಸ್ತೀರ್ಣ 60 X 40 ಅಡಿಗಳ ನಿವೇಶನವನ್ನು ದಿ: 24/11/2006ರಂದು ಖರೀದಿಸಿರುತ್ತಾರೆ. | ಎದುರುದಾರರ ತಾಯಿ ಶ್ರೀಮತಿ. ಲಕ್ಷ್ಮಮ್ಮರವರ ಹೆಸರಿನಲ್ಲಿ | 9,60,000/- |
| 7 | ಬೆಂಗಳೂರು ದಕ್ಷಿಣ ತಾಲೂಕು ತಾವರೆಕೆರೆ ಹೋಬಳಿ, ಚನ್ನೇನಹಳ್ಳಿ ಗ್ರಾಮದ ನಿವೇಶನ ಸಂ.47 ಅಸೆಸ್‌ಮೆಂಟ್ ನಂ.10, ವಿಸ್ತೀರ್ಣ 40 X 40 ಅಡಿಗಳ ನಿವೇಶನವನ್ನು ದಿ: 06/12/2013ರಂದು ಖರೀದಿಸಿರುತ್ತಾರೆ. | ಎದುರುದಾರರ ತಾಯಿ ಶ್ರೀಮತಿ. ಲಕ್ಷ್ಮಮ್ಮರವರ ಹೆಸರಿನಲ್ಲಿ | 7,12,000/- |
| 8 | ಚಿತ್ರದುರ್ಗ ತಾಲೂಕು ಹಾಯ್ಕಲ್ ಗ್ರಾಮದ ರಿ.ಸ.ನಂ.371ರಲ್ಲಿ 9 ಎಕರೆ 26 ಗುಂಟೆ ಜಮೀನನ್ನು ದಿ: 11/01/2008ರಂದು ಖರೀದಿಸಿರುತ್ತಾರೆ. | ಎದುರುದಾರರ ತಾಯಿ ಶ್ರೀಮತಿ. ಲಕ್ಷ್ಮಮ್ಮರವರ ಹೆಸರಿನಲ್ಲಿ | 1,99,400/- |

ii(b) ತನಿಖಾಧಿಕಾರಿಗಳು ಪ್ರಕರಣದ ತನಿಖೆಯ ಸಮಯದಲ್ಲಿ ಎದುರುದಾರರು ಅವರ ಹೆಸರಿನಲ್ಲಿ ಈ ಕೆಳಕಂಡ ಆಸ್ತಿಗಳನ್ನು ಖರೀದಿಸಿರುತ್ತಾರೆಂದು ವರದಿಯಲ್ಲಿ ತಿಳಿಸಿರುತ್ತಾರೆ.

| ಕ್ರಮ ಸಂಖ್ಯೆ | ವಾಹನಗಳ ವಿವರ | ಯಾರ ಹೆಸರಿನಲ್ಲಿ ಖರೀದಿಸಲಾಗಿದೆ | ಅಂದಾಜು ಮೌಲ್ಯ ರೂ.ಗಳಲ್ಲಿ |
|---|---|---|---|
| 1 | ರಾಯಲ್ ಎನ್‌ಫೀಲ್ಡ್ ಥಂಡರ್ ಬರ್ಡ್-350 ಸಿಸಿ ಮೋಟಾರ್ ಸೈಕಲ್‌ನ ನೋಂದಣಿ ಸಂ.ಕೆಎ-16-ಇಇ-6846. | ಎದುರುದಾರರ ಹೆಸರಿನಲ್ಲಿ | 1,43,098/- |
| 2 | ಹೀರೋ ಹೋಂಡಾ ಸೂಪರ್ ಸ್ಪ್ಲೆಂಡರ್ ಮೋಟಾರ್ ಸೈಕಲ್ ನೋಂದಣಿ ಸಂ.ಕೆಎ16-ಕ್ಯೂ-4121. | ಎದುರುದಾರರ ಹೆಸರಿನಲ್ಲಿ | 43,400/- |

ii(c) ತನಿಖಾಧಿಕಾರಿಗಳು ಪ್ರಕರಣದ ತನಿಖೆಯ ಸಮಯದಲ್ಲಿ ಎದುರುದಾರರು ಅವರ ಹೆಸರಿನಲ್ಲಿ, ಅವರ ಪತ್ನಿಯ ಹೆಸರಿನಲ್ಲಿ ಮತ್ತು ಅವರ ತಾಯಿಯ ಹೆಸರಿನಲ್ಲಿ ಬ್ಯಾಂಕುಗಳಿಂದ ಸಾಲಪಡೆದಿರುತ್ತಾರೆಂದು ವರದಿಯಲ್ಲಿ ತಿಳಿಸಿರುತ್ತಾರೆ.

| ಕ್ರಮ ಸಂಖ್ಯೆ | ಬ್ಯಾಂಕುಗಳ ವಿವರ | ಸಾಲ ಯಾರ ಹೆಸರಿನಲ್ಲಿ | ಸಾಲ ಪಡೆದ ದಿನಾಂಕ | ಸಾಲದ ಮೊತ್ತ ರೂ.ಗಳಲ್ಲಿ |
|---|---|---|---|---|
| 1 | ಚಳ್ಳಕೆರೆ ಶಾಖೆಯ ಕರ್ನಾಟಕ ಬ್ಯಾಂಕ್‌ನ ಖಾತೆ ಸಂ. 167001000007001 | ಎದುರುದಾರರ ಹೆಸರಿನಲ್ಲಿ | 11/01/2016 | 1,00,000/- |
| 2 | ಚಿತ್ರದುರ್ಗ ಇಂಡಿಯನ್ ಬ್ಯಾಂಕ್ ಉಳಿತಾಯ ಖಾತೆ ಸಂ.6046668132 | ಎದುರುದಾರರ ಪತ್ನಿ ಶ್ರೀಮತಿ. ಶರಾವತಿಯ ಹೆಸರಿನಲ್ಲಿ | 07/09/2012 ರಿಂದ 22/12/2016 | 6,00,000/- |
| 3 | ಚಿತ್ರದುರ್ಗ ವಿಶ್ವಬಂಧು ಅರ್ಬನ್ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್, ಖಾತೆ ಸಂ.74/5 | ಎದುರುದಾರರ ತಾಯಿ ಶ್ರೀಮತಿ ಲಕ್ಷ್ಮಮ್ಮರವರ ಹೆಸರಿನಲ್ಲಿ | 25/03/2014 | 3,00,000/- |
| 4 | ಚಿತ್ರದುರ್ಗ ಇಂಡಿಯನ್ ಬ್ಯಾಂಕ್ ಜ್ಯುಯಲರಿ ಸಾಲದ ಮೊತ್ತ. | ಎದುರುದಾರರ ತಾಯಿ ಶ್ರೀಮತಿ ಲಕ್ಷ್ಮಮ್ಮರವರ ಹೆಸರಿನಲ್ಲಿ | 25/03/2014 | 3,00,000/- |
| 5 | ಚಿತ್ರದುರ್ಗ ಇಂಡಿಯನ್ ಬ್ಯಾಂಕ್ ಜ್ಯುಯಲರಿ ಸಾಲದ ಮೊತ್ತ. | ಎದುರುದಾರರ ತಾಯಿ ಶ್ರೀಮತಿ ಲಕ್ಷ್ಮಮ್ಮರವರ ಹೆಸರಿನಲ್ಲಿ | 25/03/2014 | 2,98,000/- |

ii(d) ತನಿಖಾಧಿಕಾರಿಗಳು ಪ್ರಕರಣದ ತನಿಖೆಯ ಸಮಯದಲ್ಲಿ ಎದುರುದಾರರು ಅವರ ಹೆಸರಿನಲ್ಲಿದ್ದ ಮತ್ತು ಅವರ ತಾಯಿ, ತಂದೆರವರ ಹೆಸರಿನಲ್ಲಿದ್ದ ಆಸ್ತಿಯನ್ನು ಮಾರಾಟಮಾಡಿರುತ್ತಾರೆಂದು ವರದಿಯಲ್ಲಿ ತಿಳಿಸಿರುತ್ತಾರೆ.

| ಕ್ರಮ ಸಂಖ್ಯೆ | ಆಸ್ತಿಗಳ ವಿವರ | ಮಾರಾಟ ಮಾಡಿದ ವ್ಯಕ್ತಿ | ಯಾವ ದಿನಾಂಕ ಮಾರಾಟ ಮಾಡಲಾಗಿದೆ. | ಮೊತ್ತ ರೂ.ಗಳಲ್ಲಿ |
|---|---|---|---|---|
| 1 | ಚಿತ್ರದುರ್ಗನಗರದ ವಿಜಯನಗರ ಬಡಾವಣೆಯಲ್ಲಿನ ಖಾತಾ ನಂ.4262 ಅಸೆಸ್‌ಮೆಂಟ್ ನಂ.2856/ಎ/64/26/5704ರ ವಿಸ್ತೀರ್ಣ 32 X 55 ಅಳತೆಯ ನಿವೇಶನ. | ಎದುರುದಾರರು ಮಾರಾಟ ಮಾಡಿರುತ್ತಾರೆ. | 08/05/2009 | 10,04,000/- |

| | | | | |
|---|---|---|---|---|
| 2 | ಚಿತ್ರದುರ್ಗ ತಾಲೂಕಿನ ಹಾಯ್ಕಲ್ ಗ್ರಾಮದ ರಿ.ಸ. ನಂ. 371ರಲ್ಲಿ 9 ಎಕರೆ 26 ಗುಂಟೆ ಜಮೀನು | ಎದುರುದಾರರ ತಾಯಿ ಶ್ರೀಮತಿ ಲಕ್ಷ್ಮಮ್ಮ ಮಾರಾಟ ಮಾಡಿರುತ್ತಾರೆ. | 31/10/2013 | 7,53,000/– |
| 3 | ಚಿತ್ರದುರ್ಗ ತಾಲೂಕಿನ ಮೆದೆಹಳ್ಳಿ ಗ್ರಾಮಪಂಚಾಯಿತಿ ವ್ಯಾಪ್ತಿಯ ಕೆಳಗೋಟೆ ಗ್ರಾಮದ (ಮಾರುತಿನಗರ) ಸೈಟ್ ನಂ.13, ಖಾತೆ ಸಂ.154/149 ರಲ್ಲಿನ ನಿವೇಶನ 40 X 15 ರಲ್ಲಿರುವ ಮನೆಯನ್ನು | ಎದುರುದಾರರ ತಂದೆ ಶ್ರೀ. ದಿವಂಗತ ಲಿಂಗಪ್ಪ, ಮಾರಾಟ ಮಾಡಿರುತ್ತಾರೆ | 19/07/2004 | 2,00,000/– |

iii) ಎದುರುದಾರರು ಅವರ ಸೇವಾ ಅವಧಿಯಲ್ಲಿ ಆಸ್ತಿ ಮತ್ತು ದಾಯಿತ್ವದ ಪಟ್ಟಿಗಳನ್ನು ನಿಯಮಿಸಲಾದ ಪ್ರಾಧಿಕಾರಕ್ಕೆ ಸಲ್ಲಿಸಬೇಕಾಗಿದ್ದು, ಅವರು ಮಾಹಿತಿ ಸಲ್ಲಿಸದೇ ಇರುವುದು ಕಂಡುಬಂದಿರುತ್ತದೆ.

iv) ಎದುರುದಾರರು ಅವರ ಸೇವಾ ಅವಧಿಯಲ್ಲಿ ಎದುರುದಾರರು ಅವರ ಹೆಸರಿನಲ್ಲಿ ಮತ್ತು ಬೇನಾಮಿಯಾಗಿ ಅವರ ಕುಟುಂಬದವರ ಹೆಸರಿನಲ್ಲಿ ಆಸ್ತಿಗಳನ್ನು ಪ್ಯಾರಾ– ii(a) ರಲ್ಲಿ ನಮುದಿಸಿರುವ ಆಸ್ತಿಗಳನ್ನು ಖರೀದಿಸುವ ಪೂರ್ವದಲ್ಲಿ ಖರೀದಿಸುವ ಬಗ್ಗೆ ಮತ್ತು ಐಟಂ 1, 2 ಮತ್ತು 3ರಲ್ಲಿ ಮನೆ ಕಟ್ಟಿಸುವ ಪೂರ್ವದಲ್ಲಿ ನಿಯಮಿಸಲಾದ ಪ್ರಾಧಿಕರದಿಂದ ಅನುಮತಿ ಪಡೆಯದೆ ಆಸ್ತಿಯನ್ನು ಖರೀದಿಸಿದ್ದು ಮತ್ತು ಮನೆಯ ಕಟ್ಟಡವನ್ನು ಕಟ್ಟಿಸಿರುತ್ತಾರೆ ಹಾಗೂ ಖರೀದಿಸಿದ ನಂತರದಲ್ಲಿ ಮತ್ತು ಕಟ್ಟಡ ಕಟ್ಟಿದ ನಂತರದಲ್ಲಿ ಮಾಹಿತಿ ಸಲ್ಲಿಸಿರುವುದಿಲ್ಲ.

v) ಎದುರುದಾರರು ಅವರ ಸೇವಾ ಅವಧಿಯಲ್ಲಿ ಪ್ಯಾರಾ– ii(b) ರಲ್ಲಿ ನಮುದಿಸಿರುವ ವಾಹನಗಳನ್ನು ಖರೀದಿಸುವ ಪೂರ್ವದಲ್ಲಿ ನಿಯಮಿಸಲಾದ ಪ್ರಾಧಿಕಾರದಿಂದ ಅನುಮತಿ ಪಡೆಯದೆ ಹಾಗೂ ಖರೀದಿಸಿದ ನಂತರದಲ್ಲಿ ಮಾಹಿತಿ ಸಲ್ಲಿಸಿರುವುದಿಲ್ಲ.

vi) ಎದುರುದಾರರು ಅವರ ಸೇವಾ ಅವಧಿಯಲ್ಲಿ ಪ್ಯಾರಾ– ii(c) ರಲ್ಲಿ ನಮೂದಿಸಿರುವ ಬ್ಯಾಂಕುಗಳಲ್ಲಿ ಅವರ ಹೆಸರಿನಲ್ಲಿ, ಪತ್ನಿಯ ಹೆಸರಿನಲ್ಲಿ ಮತ್ತು ಅವರ ತಾಯಿಯವರ ಹೆಸರಿನಲ್ಲಿ ಸಾಲ ಪಡೆದಿದ್ದು, ಸಾಲ ಪಡೆಯುವ ಮುನ್ನ ಹಾಗೂ ಸಾಲ ಪಡೆದ ನಂತರ ನಿಯಮಿಸಲಾದ ಪ್ರಾಧಿಕಾರಕ್ಕೆ ಮಾಹಿತಿ ಸಲ್ಲಿಸದೆ ಇರುವುದು ಕಂಡುಬಂದಿರುತ್ತದೆ.

vii) ಎದುರುದಾರರು ಅವರ ಸೇವಾ ಅವಧಿಯಲ್ಲಿ ಪ್ಯಾರಾ- ii(d) ರಲ್ಲಿ ನಮೂದಿಸಿರುವ ಅವರ ಹೆಸರಿನಲ್ಲಿರುವ ಮತ್ತು ಅವರ ತಾಯಿ ಮತ್ತು ತಂದೆಯ ಹೆಸರಿನಲ್ಲಿರುವ ಆಸ್ತಿಗಳನ್ನು ಮಾರಾಟ ಮಾಡಿದ್ದು, ಆ ಆಸ್ತಿಗಳನ್ನು ಮಾರಾಟಮಾಡುವ ಪೂರ್ವದಲ್ಲಿ ನಿಯಮಿಸಲಾದ ಪ್ರಾಧಿಕಾರದಿಂದ ಅನುಮತಿ ಪಡೆಯದೆ ಮಾರಾಟ ಮಾಡಿದ್ದು ಮತ್ತು ನಂತರದಲ್ಲಿ ಸದರಿ ಮಾಹಿತಿಯನ್ನು ನಿಯಮಿಸಲಾದ ಪ್ರಾಧಿಕಾರಕ್ಕೆ ಸಲ್ಲಿಸದೆ ಇರುವುದು ಕಂಡುಬಂದಿರುತ್ತದೆ.

ಎದುರುದಾರರು ಮೇಲೆ ತಿಳಿಸಿದ ಪ್ಯಾರಾ- (iv) ರಿಂದ (vii) ರಲ್ಲಿ ನಮೂದಿಸಿದಂತೆ ಆಸ್ತಿಗಳನ್ನು ಖರೀದಿಸುವ ಪೂರ್ವದಲ್ಲಿ, ಕಟ್ಟಡಗಳನ್ನು ಕಟ್ಟುವ ಪೂರ್ವದಲ್ಲಿ, ಸಾಲ ಪಡೆಯುವ ಪೂರ್ವದಲ್ಲಿ, ವಾಹನ ಖರೀದಿಸುವ ಪೂರ್ವದಲ್ಲಿ ಮತ್ತು ಆಸ್ತಿಗಳನ್ನು ಮಾರಾಟ ಮಾಡುವ ಪೂರ್ವದಲ್ಲಿ ನಿಯಮಿಸಲಾದ ಪ್ರಾಧಿಕಾರದಿಂದ ಅನುಮತಿ ಪಡೆಯದೆ ಇರುವುದರಿಂದ ಹಾಗೂ ತದನಂತರದಲ್ಲಿ ನಿಯಮಿಸಲಾದ ಪ್ರಾಧಿಕಾರಕ್ಕೆ ಮಾಹಿತಿ ಸಲ್ಲಿಸದೆ ಇರುವುದರಿಂದ ಎದುರುದಾರರು ನಿಯಮ 21(4), 23(2) ಮತ್ತು 24(3) ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಗಳು 1966 (ಪ್ರಸ್ತುತ ನಿಯಮ 24(3) ಮತ್ತು 24(4) ರನ್ವಯ ಕರ್ನಾಟಕ ನಾಗರಿಕ ಸೇವಾ (ನಡತೆ) 2021) ನಿಯಮಗಳನ್ನು ಪಾಲಿಸದೆ, ಕರ್ತವ್ಯಲೋಪವೆಸಗಿರುವುದು ಕಂಡುಬಂದಿರುತ್ತದೆ.

ತನಿಖಾಧಿಕಾರಿಯವರು ಎದುರುದಾರರಿಗೆ ಅವರು ಹೊಂದಿದ ಆಸ್ತಿ ಮತ್ತು ದಾಯಿತ್ವದ ಬಗ್ಗೆ ಪೂರ್ಣ ವಿವರಣೆ ಕೋರಿ ಅನುಬಂಧಗಳಲ್ಲಿ ಮಾಹಿತಿಯನ್ನು ಕೋರಿದ್ದು, ಎದುರುದಾರರು ತನಿಖಾಧಿಕಾರಿಯು ಕೋರಿದ ಪೂರ್ಣ ಮಾಹಿತಿಯನ್ನು ಹಾಗೂ ವಿವರಣೆಯನ್ನು ಸಲ್ಲಿಸಿರುವುದಿಲ್ಲ. ಎದುರುದಾರರು ಸಲ್ಲಿಸಿದ ಮಾಹಿತಿ ಹಾಗೂ ವಿವರಣೆಯು ತೃಪ್ತಿದಾಯಕವಾದ ಉತ್ತರ ಅಥವಾ ವಿವರಣೆ ಆಗಿರುವುದಿಲ್ಲ.

viii) ತನಿಖಾಧಿಕಾರಿಯವರು ಸಂಗ್ರಹಿಸಿದ ದಾಖಲೆಗಳು, ವೇತನ ಆದಾಯದ ದಾಖಲೆಗಳು, ಸಾಕ್ಷಿದಾರರ ಹೇಳಿಕೆಗಳಿಂದ ಎದುರುದಾರರು ಅವರ ಪರಿಶೀಲನಾ ಅವಧಿಯಾದ ದಿ: 03/02/2004 ರಿಂದ ದಿ: 22/12/2016ರ ಅವಧಿಯಲ್ಲಿ ಬಲ್ಲಮೂಲ ಆದಾಯಕ್ಕಿಂತ ಅಧಿಕವಾಗಿ ಶೇಕಡ 20.99ರಷ್ಟು ಅಸಮತೋಲನ ಆಸ್ತಿಯನ್ನು ಹೊಂದಿರುತ್ತಾರೆ ಮತ್ತು ಕಾನೂನಿನ್ವಯ ಅನುಮತಿ ಪಡೆಯದೇ ಸ್ಥಿರ ಆಸ್ತಿಯನ್ನು ಖರೀದಿಸಿರುವುದು, ವಾಹನಗಳನ್ನು ಖರೀದಿಸಿರುವುದು, ಸಾಲ ಪಡೆದಿರುವುದು ಹಾಗೂ ಅನುಮತಿ ಇಲ್ಲದೆ ಆಸ್ತಿಯನ್ನು ಮಾರಾಟಮಾಡಿರುವುದು ಹಾಗೂ ತದನಂತರ, ಮಾಹಿತಿ ಸಲ್ಲಿಸದೆ ಇರುವುದು ಹಾಗೂ ಇತರೇ ಅಂಶಗಳು, ಎದುರುದಾರರ ದುರ್ನಡತೆಯನ್ನು ತೋರಿಸುತ್ತದೆ. ಆ ಕಾರಣ ತನಿಖಾಧಿಕಾರಿಯವರು ಅಭಿಯೋಜನಾ ಮಂಜೂರಾತಿಯನ್ನು

ಪಡೆದು ಎದುರುದಾರರ ವಿರುದ್ಧ ಕಲಂ 13(1)(ಇ) ಸಹಿತ 13(2) ಲಂಚ ಪ್ರತಿಬಂಧಕ ಕಾಯ್ದೆ 1988ರಡಿಯಲ್ಲಿ ದೋಷಾರೋಪಣ ಪತ್ರವನ್ನು ಸಲ್ಲಿಸಿರುತ್ತಾರೆ.

3) ಎದುರುದಾರರಿಂದ ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿ ಕೇಳಲಾಗಿತ್ತು. ಎದುರುದಾರರು ದಿ: 26/08/2021ರಂದು ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿಯನ್ನು ಸಲ್ಲಿಸಿರುತ್ತಾರೆ. ಎದುರುದಾರರು ಸಲ್ಲಿಸಿದ ಸಮಜಾಯಿಷಿಯಲ್ಲಿ ಪರಿವೀಕ್ಷಣಾ ಟಿಪ್ಪಣಿಯ ಅಂಶಗಳನ್ನು ಅಲ್ಲಗಳೆದಿರುತ್ತಾರೆ. ಸಮಜಾಯಿಷಿಯ ಜೊತೆ ತನಿಖಾಧಿಕಾರಿಯವರು ದೋಷಾರೋಪಣ ಪತ್ರದ ಜೊತೆ ಸಲ್ಲಿಸಿದ ದೂರುದಾರರ ಸೋರ್ಸ್ ವರದಿ ಮತ್ತು ಪೊಲೀಸ್ ಅಧೀಕ್ಷಕರ ಆದೇಶದ ಪ್ರತಿ ಮತ್ತು ಪ್ರಥಮ ವರ್ತಮಾನ ವರದಿ, ದೋಷಾರೋಪಣ ಪತ್ರದ ಪ್ರತಿ ಮತ್ತು ದೋಷಾರೋಪಣ ಪತ್ರದಲ್ಲಿ ನಮೂದಿಸಿದ ಆಸ್ತಿಗಳ ವಿವರಗಳೆಂದು ಅನುಬಂಧ–1 ರಿಂದ 4ನ್ನು ಸಮಜಾಯಿಷಿ ಜೊತೆ ಸಲ್ಲಿಸಿದ್ದಲ್ಲದೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ಕಲಂ 8 (2) (ಡಿ) ಸ್ಪಷ್ಟ ಉಲ್ಲಂಘನೆಯಾಗುತ್ತದೆ. ಆ ಕಾರಣ ಈ ಸಂಸ್ಥೆಯಲ್ಲಿ ತನಿಖೆಯನ್ನು ಕೈಬಿಡಲು ಕೋರಿರುತ್ತಾರೆ. ತನಿಖಾಧಿಕಾರಿಯವರು ಸಂಗ್ರಹಿಸಿದ ದಾಖಲೆಗಳಲ್ಲಿ ಎದುರುದಾರರು ಅವರ ಮತ್ತು ಬೇನಾಮಿಯಾಗಿ ಅವರ ಕುಟುಂಬದವರ ಹೆಸರಿನಲ್ಲಿ ಅವರ ಪರಿಶೀಲನಾ ಅವಧಿಯಲ್ಲಿ ನಿಯಮಿಸಲಾದ ಪ್ರಾಧಿಕಾರದಿಂದ ಅನುಮತಿ ಪಡೆದು ಆಸ್ತಿಯನ್ನು ಖರೀದಿಸಿದ ಬಗ್ಗೆ, ಮಾರಾಟಮಾಡಿದ ಬಗ್ಗೆ, ವಾಹನ ಖರೀದಿಸಿದ ಬಗ್ಗೆ ಮತ್ತು ಬ್ಯಾಂಕುಗಳಿಂದ ಸಾಲ ಪಡೆದ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸದ ಕಾರಣ ಮತ್ತು ಸಮಜಾಯಿಷಿಯ ಅಂಶಗಳ ಮೇರೆಗೆ ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತ ಕಾರಣಗಳಾಗಿ ಕಂಡುಬರುವುದಿಲ್ಲ.

4) ದೂರು ಅರ್ಜಿ, ಸಾಕ್ಷಿದಾರರ ಹೇಳಿಕೆಗಳು, ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆಗಳ, ಹಾಗೂ ದೋಷಾರೋಪಣ ಪತ್ರದಲ್ಲಿರುವ ಮಾಹಿತಿಗಳಿಂದ ಎದುರುದಾರರು ನೀಡಿರುವ ಉತ್ತರಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ, ಎದುರುದಾರರ ವಿರುದ್ಧ ನಡೆವಳಿಯನ್ನು ಕೈಬಿಡಲು ಸೂಕ್ತ / ಸಮಂಜಸ / ಸಮಾಧಾನಕರ ಕಾರಣ ತೋರಿಸಿಲ್ಲವೆಂದು ಅಭಿಪ್ರಾಯಕ್ಕೆ ಬರಲಾಗಿದೆ.

5) ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 2 (12) ರ ಪ್ರಕಾರ ಎದುರುದಾರರು ಸರ್ಕಾರಿ / ಸಾರ್ವಜನಿಕ ನೌಕರರಾಗಿದ್ದು, ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ತವ್ಯದಲ್ಲಿ ನಿಷ್ಠೆ ತೋರಿಸದೆ ಭ್ರಷ್ಟಾಚಾರವೆಸಗಿ ಕ.ನಾ.ಸೇ. (ನಡತೆ) ನಿಯಮಗಳು 1966 ನಿಯಮ 3 (1)(i) ರಿಂದ (iii) (ಪ್ರಸ್ತುತ ಕ.ನಾ.ಸೇ. (ನಡತೆ) ನಿಯಮಗಳು 2021 ನಿಯಮ (i) ರಿಂದ (iv)) ರನ್ವಯ ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. ಎದುರುದಾರರ ವಿರುದ್ಧ ಇಲಾಖಾ ವಿಚಾರಣಾ ಮಾಡಲು ಕರ್ನಾಟಕ ನಾಗರಿಕ ಸೇವಾ –(ವರ್ಗೀಕರಣ, ನಿಯಂತ್ರಣ ಮತ್ತು

ಮೇಲ್ಮನವಿ) ನಿಯಮಾವಳಿ 1957 ನಿಯಮ 14(ಎ)ರಡಿ ವಿಚಾರಣೆ ನಡೆಸಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯಿದೆ 12(3) ರಡಿ ಪ್ರದತ್ತವಾದ ಅಧಿಕಾರದಡಿ, ಈ ವರದಿ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

6) ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ, ಈ ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

16/2/22

(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.